# ಕೋವಿಡ್-19 ಹರಡುವ ಸರಣಿಯನ್ನು ತುಂಡರಿಸಲು ಮಾರ್ಗದರ್ಶಿ ಸೂತ್ರಗಳು – 1

## 27ನೇ ಏಪ್ರಿಲ್ ರಾತ್ರಿ 9 ರಿಂದ 12ನೇ ಮೇ ಬೆಳಗಿನ 6 ಘಂಟೆಯವರೆಗೆ ಚಾಲ್ತಿಯಲ್ಲಿರುತ್ತದೆ

### ಮೆಟ್ರೋ ರೈಲು ಸೇವೆಗಳು

ಸೇವೆ ಲಭ್ಯವಿರುವುದಿಲ್ಲ

### ಟ್ಯಾಕ್ಸಿ ಮತ್ತು ಆಟೋರಿಕ್ಷಾಗಳು

ಟ್ಯಾಕ್ಸಿ ಮತ್ತು ಆಟೋರಿಕ್ಷಾ ಸೇವೆಗಳಿಗೆ ತುರ್ತುಪರಿಸ್ಥಿತಿಯಲ್ಲಿ ಮಾತ್ರ ಅನುಮತಿ ನೀಡಲಾಗುವುದು

### ವಿಮಾನ ಮತ್ತು ರೈಲುಗಳು

ಈಗಾಗಲೇ ನಿಗದಿಯಾದ ಸೇವೆಗಳು ಚಾಲ್ತಿಯಲ್ಲಿರುತ್ತವೆ.

ವಿಮಾನ/ರೈಲು ಟಿಕೇಟುಗಳನ್ನೇ ವಿಮಾನ ನಿಲ್ದಾಣ/ರೈಲು ನಿಲ್ದಾಣದವರೆಗೆ ಪ್ರಯಾಣ ಮಾಡಲು ಪಾಸ್ ಎಂದು ಪರಿಗಣಿಸಲಾಗುವುದು.

### ಶಿಕ್ಷಣ ಸಂಸ್ಥೆಗಳು

ಎಲ್ಲ ಶಿಕ್ಷಣ ಸಂಸ್ಥೆಗಳು ಮುಚ್ಚಲ್ಪಟ್ಟಿರುತ್ತವೆ.

ಎಲ್ಲ ಶಿಕ್ಷಣ ಸಂಸ್ಥೆಗಳು ಮುಚ್ಚಲ್ಪಟ್ಟಿರುತ್ತವೆ. ಆದರೆ, ಈಗಾಗಲೇ ನಿಗದಿಯಾಗಿರುವ ಪರೀಕ್ಷೆಗಳನ್ನು ಕೋವಿಡ್ ನಿರ್ಬಂಧನೆಗಳಿಗೆ ಒಳಪಟ್ಟು ನಡೆಸಲು ಅನುಮತಿ ನೀಡಲಾಗುವುದು. ಪರೀಕ್ಷಾ ಪ್ರವೇಶ ಪತ್ರಗಳನ್ನೇ ವಿದ್ಯಾರ್ಥಿಗಳು ಪ್ರಯಾಣಕ್ಕಾಗಿ ಪಾಸ್ ರೂಪದಲ್ಲಿ ಬಳಸಬಹುದಾಗಿದೆ.

### ಹೋಟೆಲುಗಳು ಮತ್ತು ರೆಸ್ಟೋರೆಂಟ್ ಗಳು

ಆರೋಗ್ಯ ಇಲಾಖೆ, ಪೋಲೀಸ್ ಇಲಾಖೆ, ಸರ್ಕಾರಿ ನೌಕರರು, ಆರೋಗ್ಯ ಕಾರ್ಯಕರ್ತರು ಮತ್ತು ಸಿಕ್ಕಿಹಾಕಿಕೊಂಡ ವ್ಯಕ್ತಿಗಳು (ಪ್ರವಾಸಿಗಳೂ ಸೇರಿದಂತೆ) – ಇವರಿಗೆ ಮಾತ್ರ ಆತಿಥ್ಯ ಸೇವೆಗಳು ಲಭ್ಯವಿರುತ್ತವೆ.

ಹೋಟೆಲುಗಳು ಮತ್ತು ರೆಸ್ಟೋರೆಂಟ್ ಗಳು ಪಾರ್ಸೆಲ್/ಹೋಂ ಡೆಲಿವರಿ ಸೇವೆಗಳನ್ನು ಮಾತ್ರ ಒದಗಿಸಬಹುದು.

### ಜನಸಂದಣಿ ಸೇರುವ ಸ್ಥಳಗಳು

ಎಲ್ಲಾ ಸಿನಿಮಾ ಮಂದಿರಗಳು, ಶಾಪಿಂಗ್ ಮಾಲ್‌ಗಳು, ಜಿಮ್ನೇಶಿಯಂಗಳು, ಕ್ರೀಡಾ ಸಂಕೀರ್ಣಗಳು, ಕ್ರೀಡಾಂಗಣಗಳು, ಈಜುಕೊಳಗಳು, ಮನರಂಜನಾ ಪಾರ್ಕ್‌ಗಳು, ಕ್ಲಬ್‌ಗಳು, ಥಿಯೇಟರ್ ಗಳು, ಬಾರ್ ಮತ್ತು ಆಡಿಟೋರಿಯಂಗಳು, ಸಭೆ ಸೇರುವ ಸ್ಥಳಗಳು, ಪೂಜಾಸ್ಥಳಗಳು ಮತ್ತು ಇಂತಹದೇ ಇನ್ನಿತರ ಸ್ಥಳಗಳಿಗೆ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿದೆ.

ಕ್ರೀಡಾಂಗಣಗಳಲ್ಲಿ ಮತ್ತು ಆಟದ ಬಯಲುಗಳಲ್ಲಿ ಕ್ರೀಡಾ ಕಾರ್ಯಕ್ರಮಗಳು ಮತ್ತು ತರಬೇತಿಗೆ ಅನುಮತಿ ನೀಡಲಾಗಿದೆ. ಆದರೆ, ಇವುಗಳಿಗೆ ಪ್ರೇಕ್ಷಕರು ಇರುವಂತಿಲ್ಲ. ಭಾರತೀಯ ಈಜು ಪ್ರಾಧಿಕಾರ ಅನುಮೋದಿಸಿರುವ ಈಜುಕೊಳಗಳನ್ನು ತರಬೇತಿಯ ಉದ್ದೇಶಕ್ಕಾಗಿ ಮಾತ್ರ ತೆರೆಯಬಹುದಾಗಬಹುದಾಗಿದೆ.

**ಮೂಲ** Covid-19 Guidelines 26.04.2021

# ಕೋವಿಡ್-19 ಹರಡುವ ಸರಣಿಯನ್ನು ತುಂಡರಿಸಲು ಮಾರ್ಗದರ್ಶಿ ಸೂತ್ರಗಳು – 1

## 27ನೇ ಏಪ್ರಿಲ್ ರಾತ್ರಿ 9 ರಿಂದ 12ನೇ ಮೇ ಬೆಳಗಿನ 6 ಘಂಟೆಯವರೆಗೆ ಚಾಲ್ತಿಯಲ್ಲಿರುತ್ತದೆ

**ಆಯುಷ್ ಸೇವೆಗಳು ಮತ್ತು ಪಶುವೈದ್ಯಕೀಯ ಆಸ್ಪತ್ರೆಗಳು ಸೇರಿದಂತೆ ಎಲ್ಲ ಆರೋಗ್ಯ ಸೇವೆಗಳು ಲಭ್ಯವಿರುತ್ತವೆ**

### ವೈದ್ಯಕೀಯ ಸೇವೆಗಳು

ಎಲ್ಲ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು, ಕ್ಲಿನಿಕ್‌ಗಳು, ಲ್ಯಾಬ್‌ಗಳು, ಕಲೆಕ್ಷನ್ ಸೆಂಟರ್ ಗಳು, ಟೆಲಿಮೆಡಿಸಿನ್ ಸೇವೆಗಳು, ಚಿಕಿತ್ಸಾಲಯಗಳು, ಫಾರ್ಮಸಿಗಳು, ಔಷಧಾಲಯಗಳು, ಜನೌಷಧಿ ಕೇಂದ್ರಗಳು, ರಕ್ತನಿಧಿಗಳು, ಮನೆಯಲ್ಲಿಯೇ ಶುಶ್ರೂಷೆ ನೀಡುವ ಸೇವೆಗಳು, ವೈದ್ಯಕೀಯ ಉಪಕರಣಗಳನ್ನು ಮಾರುವ ಅಂಗಡಿಗಳು ಸೇರಿದಂತೆ ಎಲ್ಲ ವಿಧದ ಮೆಡಿಕಲ್ ಶಾಪ್ ಗಳು ಕಾರ್ಯಾಚರಣೆ ಮಾಡುತ್ತವೆ.

### ಎಲ್ಲ ಔಷಧೀಯ ಮತ್ತು ಸಂಶೋಧನಾ ಲ್ಯಾಬ್‌ಗಳು ಕಾರ್ಯನಿರ್ವಹಿಸುತ್ತವೆ.

### ಚಲನವಲನಗಳು

ಎಲ್ಲ ವೈದ್ಯಕೀಯ, ಅರೆವೈದ್ಯಕೀಯ ಸಿಬ್ಬಂದಿಗಳು, ನರ್ಸ್ ಗಳು, ವಿಜ್ಞಾನಿಗಳು, ಲ್ಯಾಬ್ ಟೆಕ್ನೀಷಿಯನ್ ಗಳು, ಪ್ರಸೂತಿ ಮಾಡಿಸುವವರು ಮತ್ತು ಆಸ್ಪತ್ರೆಗಳಿಗೆ ಅವಶ್ಯವಿರುವ ಇತರೆ ಪೂರಕ ಸೇವೆಗಳನ್ನು ಒದಗಿಸುವ ಎಲ್ಲ ಸಿಬ್ಬಂದಿಗಳ ಚಲನವಲನಕ್ಕೆ ಯಾವುದೇ ನಿರ್ಬಂಧವಿಲ್ಲ. ತುರ್ತುಚಿಕಿತ್ಸೆ ಅಗತ್ಯವಿರುವ ರೋಗಿಗಳು ಮತ್ತು ಅವರ ಶುಶ್ರೂಷಕರ ಚಲನವಲನಕ್ಕೆ ಯಾವುದೇ ಅಡ್ಡಿಯಿಲ್ಲ.

### ಉತ್ಪಾದನಾ ಘಟಕಗಳು

ಎಲ್ಲ ರೀತಿಯ ಫಾರ್ಮಾಸ್ಯುಟಿಕಲ್ಸ್ ಮತ್ತು ಔಷಧಿಗಳನ್ನು (ಡ್ರಗ್ಸ್ ಗಳನ್ನು), ವೈದ್ಯಕೀಯ ಉಪಕರಣಗಳನ್ನು, ವೈದ್ಯಕೀಯ ಆಮ್ಲಜನಕವನ್ನು, ಈ ಉತ್ಪಾದನೆಗಳನ್ನು ಪ್ಯಾಕ್ ಮಾಡಲು ಬಳಸುವ ಸಾಮಗ್ರಿಗಳನ್ನು, ಇದಕ್ಕಾಗಿ ಅವಶ್ಯವಿರುವ ಕಚ್ಚಾ ಸಾಮಗ್ರಿಗಳನ್ನು ಮತ್ತು ಬಳಕೆಯಾಗುವ ಇನ್ನಿತರ ವಸ್ತುಗಳನ್ನು ಉತ್ಪಾದಿಸುವ ಎಲ್ಲ ಘಟಕಗಳು ಕಾರ್ಯನಿರ್ವಹಿಸುತ್ತವೆ.

### ನಿರ್ಮಾಣ ಕಾಮಗಾರಿಗಳು

ಎಲ್ಲ ಬಗೆಯ ನಿರ್ಮಾಣ ಕಾಮಗಾರಿಗಳನ್ನು ನಡೆಸಲು ಅನುಮತಿ ನೀಡಲಾಗಿದೆ.

**ಕೃಷಿ ಮತ್ತು ಸಾಮಾಜಿಕ ವಲಯ**

### ಕೃಷಿ

ಎಲ್ಲ ಬಗೆಯ ಕೃಷಿ ಮತ್ತ ಪೂರಕ ಚಟುವಟಿಕೆಗಳು, ಕೃಷಿಗೆ ಸಂಬಂಧಿಸಿದ ಅಂಗಡಿಗಳು, ಗೋದಾಮುಗಳು, ಕೃಷಿ ಉಪಕರಣಗಳನ್ನು ಬಾಡಿಗೆಗೆ ನೀಡುವ ಕೇಂದ್ರಗಳು ಕಂಟೈನ್ ಮೆಂಟ್ ವಲಯದಿಂದ ಹೊರಗೆ ಕಾರ್ಯನಿರ್ವಹಿಸಲು ಅನುಮತಿಸಲಾಗಿದೆ. ಪೂರಕ ಚಟುವಟಿಕೆಗಳಾದ ಮೀನುಗಾರಿಕೆ, ಕೋಳಿ ಸಾಕಾಣಿಕೆ, ಮಾಂಸ ಮತ್ತು ಹೈನೋದ್ಯಮಗಳು ಕಾರ್ಯನಿರ್ವಹಿಸಬಹುದಾಗಿದೆ.

### ಉದ್ಯೋಗ ಖಾತ್ರಿ ಯೋಜನೆ

ಕೋವಿಡ್-19 ರಾಷ್ಟ್ರೀಯ ಮಾರ್ಗದರ್ಶಿ ಸೂತ್ರಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೈಗೆತ್ತಿಕೊಂಡಿರುವ ಎಲ್ಲ ಕಾಮಗಾರಿಗಳನ್ನು ಮುಂದುವರೆಸಲು ಅನುಮತಿ ನೀಡಲಾಗಿದೆ.

**ಮೂಲ :** Covid-19 Guidelines 26.04.2021

# ಕೋವಿಡ್-19 ಹರಡುವ ಸರಣಿಯನ್ನು ತುಂಡರಿಸಲು ಮಾರ್ಗದರ್ಶಿ ಸೂತ್ರಗಳು – 1

## 27ನೇ ಏಪ್ರಿಲ್ ರಾತ್ರಿ 9 ರಿಂದ 12ನೇ ಮೇ ಬೆಳಗಿನ 6 ಘಂಟೆಯವರೆಗೆ ಚಾಲ್ತಿಯಲ್ಲಿರುತ್ತದೆ

### ಸಾರ್ವಜನಿಕ ಸೇವೆಗಳು

ಸಾರ್ವಜನಿಕ ಸೇವೆಗಳಾದ (ಪೆಟ್ರೋಲಿಯಂ, ಸಿಎನ್ ಜಿ, ಎಲ್ ಪಿಜಿ, ಪಿಎನ್ ಜಿ ಸೇರಿದಂತೆ) ವಿದ್ಯುತ್ ಉತ್ಪಾದನೆ ಮತ್ತು ಸರಬರಾಜು ಕೇಂದ್ರಗಳು, ಅಂಚೆ ಕಛೇರಿಗಳು, ವಿಪತ್ತು ನಿರ್ವಹಣೆ ಮತ್ತು ಮುನ್ಸೂಚನೆ ಸೇವೆಗಳನ್ನು ಒದಗಿಸುವ ಕೇಂದ್ರಗಳು ಕಾರ್ಯ ನಿರ್ವಹಿಸುತ್ತವೆ.

### ಸರಕು ಮತ್ತು ಕಾರ್ಗೋ

ಎಲ್ಲ ರೀತಿಯ ಸರಕು ಮತ್ತು ಕಾರ್ಗೋ (ಕಂಟೈನ್ ಮೆಂಟ್ ವಲಯಗಳ ಹೊರಗೆ) ಸಾಗಣೆಗೆ ಅನುಮತಿ ನೀಡಲಾಗಿರುತ್ತದೆ.

### ಬಸ್ಸುಗಳು ಮತ್ತು ವಾಹನಗಳು

ಬಸ್ಸುಗಳು ಅಥವಾ ಪ್ರಯಾಣಿಕರ ವಾಹನಗಳ ಸಂಚಾರಕ್ಕೆ ತುರ್ತು ಸಂದರ್ಭಗಳಲ್ಲಿ ಮಾತ್ರ ಅನುಮತಿ ನೀಡಲಾಗುವುದು.

### ಕಛೇರಿಗಳಿಗೆ ಪ್ರಯಾಣ

ಅನುಮತಿ ನೀಡಿರುವ ಚಟುವಟಿಕೆಗಳನ್ನು ನಿರ್ವಹಿಸುವ ಕಛೇರಿಗಳು ನೀಡಿರುವ ಗುರುತಿನ ಪತ್ರವನ್ನು ಹೊಂದಿರುವ ಉದ್ಯೋಗಿಗಳಿಗೆ ಮಾತ್ರ ಪ್ರಯಾಣ ಮಾಡಲು ಅವಕಾಶ ನೀಡಲಾಗುವುದು.

### ಲಸಿಕೆ ಪಡೆಯಲು ಪ್ರಯಾಣ

ಲಸಿಕೆ ಪಡೆಯಲು ಹಾಗೂ ವೈದ್ಯಕೀಯ ಪರೀಕ್ಷೆಗಳಿಗಾಗಿ ಕನಿಷ್ಟ ದಾಖಲೆಗಳ ಆಧಾರದ ಮೇಲೆ ಪ್ರಯಾಣ ಮಾಡಲು ಅನುಮತಿಸಿದೆ.

### ಅಂಗಡಿಗಳು ಮತ್ತು ಬ್ಯಾಂಕುಗಳು

ಅತ್ಯಾವಶ್ಯಕ ಸಾಮಗ್ರಿಗಳಾದ ಆಹಾರ ಪದಾರ್ಥ ಇತ್ಯಾದಿಗಳನ್ನು ಮಾರಾಟ ಮಾಡುವ ಅಂಗಡಿಗಳು, ಸ್ವತಂತ್ರವಾಗಿರುವ ಮದ್ಯದಂಗಡಿಗಳು ಬೆಳಗ್ಗೆ 6 ರಿಂದ 10 ಘಂಟೆಯವರೆಗೆ ವಹಿವಾಟು ನಡೆಸಲು ಅನುಮತಿ ನೀಡಲಾಗಿದೆ. ಹೋಂ ಡೆಲಿವರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತದೆ.

ಬ್ಯಾಂಕುಗಳು, ವಿಮಾ ಕಂಪೆನಿಗಳು ಮತ್ತು ಎಟಿಎಂಗಳು ಕಾರ್ಯಾಚರಣೆ ಮಾಡುತ್ತವೆ.

### ವಿವಾಹ ಸಮಾರಂಭಗಳು ಮತ್ತು ಶವಸಂಸ್ಕಾರ

ವಿವಾಹ ಸಮಾರಂಭಗಳಿಗೆ ಗರಿಷ್ಟ 50 ಮಂದಿಗೆ ಮತ್ತು ಶವ ಸಂಸ್ಕಾರ/ದಹನಕ್ಕಾಗಿ ಗರಿಷ್ಟ 5 ಮಂದಿ ಸೇರಲು ಅವಕಾಶವಿದೆ.

**ಮೂಲ:** Covid-19 Guidelines 26.04.2021

# ಕೋವಿಡ್-19 ಹರಡುವ ಸರಣಿಯನ್ನು ತುಂಡರಿಸಲು ಮಾರ್ಗದರ್ಶಿ ಸೂತ್ರಗಳು – 1

## 27ನೇ ಏಪ್ರಿಲ್ ರಾತ್ರಿ 9 ರಿಂದ 12ನೇ ಮೇ ಬೆಳಗಿನ 6 ಘಂಟೆಯವರೆಗೆ ಚಾಲ್ತಿಯಲ್ಲಿರುತ್ತದೆ

### ರಾತ್ರಿ ಕರ್ಫ್ಯೂ

ಅವಶ್ಯಕ ಚಟುವಟಿಕೆಗಳನ್ನು ಹೊರತುಪಡಿಸಿ, ರಾತ್ರಿ 9.00 ರಿಂದ ಬೆಳಗ್ಗೆ 6.00 ಘಂಟೆ ಅವಧಿಯಲ್ಲಿ ವ್ಯಕ್ತಿಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.



### ಸಾಮಾಜಿಕ ಅಂತರ

ಪ್ರತಿ ವ್ಯಕ್ತಿಯು ಕನಿಷ್ಟ 6 ಅಡಿಗಳ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳತಕ್ಕದ್ದು.




### ಮನೆಯಿಂದಲೇ ಕೆಲಸ

ಸಾಧ್ಯವಾದಷ್ಟು ಮಟ್ಟಿಗೆ ಮನೆಯಿಂದಲೇ ಕೆಲಸ ನಿರ್ವಹಿಸುವುದನ್ನು ಉತ್ತೇಜಿಸಲಾಗುವುದು.



### ಪದೇಪದೇ ಸ್ಯಾನಿಟೈಸ್ ಮಾಡುವುದು

ಇಡೀ ಕಛೇರಿಯನ್ನು, ಸಾಮೂಹಿಕ ಬಳಕೆ ಸ್ಥಳಗಳನ್ನು ಮತ್ತು ನಮ್ಮ ಸ್ಪರ್ಶಕ್ಕೆ ಬರುವ ಎಲ್ಲ ಸ್ಥಳಗಳನ್ನು ಸ್ಯಾನಿಟೈಸ್ ಮಾಡತಕ್ಕದ್ದು.



### ಮಾಸ್ಕ್ ಧರಿಸಿ

ಮಾಸ್ಕ್ ಧರಿಸುವುದು ಕಡ್ಡಾಯ. ಮಾಸ್ಕ್ ಧರಿಸದೇ ಸಂಚಾರ ಮಾಡುವುದು ಕಂಡಲ್ಲಿ ದಂಡ ವಿಧಿಸಲಾಗುವುದು.



### ಸಾರ್ವಜನಿಕ ಸ್ಥಳಗಳಲ್ಲಿ ಉಗಿಯುವುದು

ಸಾರ್ವಜನಿಕ ಸ್ಥಳಗಳಲ್ಲಿ ಉಗಿದರೆ ದಂಡ ತೆರುವ ಶಿಕ್ಷೆ ವಿಧಿಸಲಾಗುವುದು



### ಸ್ಕ್ರೀನಿಂಗ್ ಮತ್ತು ಸ್ವಚ್ಛತೆ



ಕಛೇರಿಗೆ ಪ್ರವೇಶ ಮಾಡುವ ಮತ್ತು ಕಛೇರಿಯಿಂದ ಹೊರಹೋಗುವ ಎಲ್ಲ ದ್ವಾರಗಳಲ್ಲಿ ಮತ್ತು ಸಾಮೂಹಿಕ ಸ್ಥಳಗಳಲ್ಲಿ ಥರ್ಮಲ್ ಸ್ಕ್ಯಾನಿಂಗ್ ಮಾಡುವುದು ಮತ್ತು ಈ ಸ್ಥಳಗಳಲ್ಲಿ ಹ್ಯಾಂಡ್ ವಾಷ್/ಸ್ಯಾನಿಟೈಸರ್ ಗಳನ್ನು ಒದಗಿಸುವುದು.



**ಮೂಲ:** Covid-19 Guidelines 26.04.2021